ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ ದಿನಾಂಕ : DATE : 23/07/2019

# ಲೋಕಸಭೆಯಲ್ಲಿ ಆರ್‌ಟಿಐ ತಿದ್ದುಪಡಿ ಮಸೂದೆ ಪಾಸ್

ನವದೆಹಲಿ: ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆಯೂ ಸ್ವಾಯತ್ತ ಸಂಸ್ಥೆಯಾಗಿರುವ ಮಾಹಿತಿ ಹಕ್ಕು ಆಯುಕ್ತರ ವೇತನ, ಅವಧಿ ಮತ್ತಿತರ ಮಹತ್ವದ ಅಂಶಗಳ ಬಗ್ಗೆ ತಾನೇ ತೀರ್ಮಾನ ಕೈಗೊಳ್ಳಲು ಅವಕಾಶ ಮಾಡಿಕೊಡುವ ಆರ್‌ಟಿಐ ತಿದ್ದುಪಡಿ ಮಸೂದೆ–2019 ಅನ್ನು ಲೋಕಸಭೆ ಅಂಗೀಕರಿಸಿತು. ಈ ತಿದ್ದುಪಡಿಯಿಂದಾಗಿ ಇದುವರೆಗೂ ಚುನಾವಣಾ ಆಯೋಗದ ರೀತಿ ಸ್ವಾಯತ್ತ ಸಂಸ್ಥೆ ಸ್ಥಾನಮಾನ ಹೊಂದಿದ್ದ ಆರ್‌ಟಿಐ ಕಾಯ್ದೆಯು ಇನ್ನು ಮುಂದಿನ ದಿನಗಳಲ್ಲಿ ಸರ್ಕಾರದ ವ್ಯಾಪ್ತಿಗೆ ಒಳಪಡಲಿದೆ. ಕೇಂದ್ರ ಸರ್ಕಾರದ ಈ ಕ್ರಮವು ಕಠಿಣ ಕಾನೂನನ್ನು ನಿಶಕ್ತಗೊಳಿಸುವ ಹಾಗೂ ಪಾರದರ್ಶಕವಾದ ಸಂಸ್ಥೆಯನ್ನು ಹಲ್ಲಿಲ್ಲದ ಹುಲಿಯಾಗಿ ಪರಿವರ್ತಿಸುವ ಯತ್ನವಾಗಿದೆ ಎಂದು ಆರೋಪಿಸಿ ವಿಪಕ್ಷಗಳು ಸಭಾತ್ಯಾಗ ಮಾಡಿದವು.